ಅ.ದಾ.106/2023 ಪಿಡಬ್ಲ್ಯೂ-1

ದಿನಾಂಕಃ06.01.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಟಿ.ಎ. ವಕೀಲರಿಂದ:**</u>

ನಾನು 2 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಮ್ಮ ಮನೆಯಲ್ಲಿ ಹೆಂಡತಿ ಮತ್ತು ಇಬ್ಬರು ಮಕ್ಕಳೊಂದಿಗೆ ವಾಸಿಸುತ್ತಿದ್ದೇನೆ. ನನ್ನ ತಾಯಿ ನನ್ನ ಅಣ್ಣನೊಂದಿಗೆ ವಾಸಿಸುತ್ತಿದ್ದರು. ಹೊರನಾಡು ಗ್ರಾಮದ ಸ.ನಂ.175 ರಲ್ಲಿ 20 ಗುಂಟೆ ಸಂಬಂಧ ನನ್ನ ಹೆಸರಿಗೆ ಪಹಣಿ ಇದೆ ಎಂದರೆ ಸರಿ. ಸದರಿ ಜಮೀನಿನ ಪೂರ್ವಕ್ಕೆ ನನಗೆ ಸೇರಿದ 4 ಎಕರೆ ಜಮೀನು, ಪಶ್ಚಿಮಕ್ಕೆ ಭೀಮೇಶ್ವರ ಜೋಶಿ ರವರ ಜಮೀನು, ಉತ್ತರಕ್ಕೆ ಪದ್ಮನಾಭ ಭಟ್ಟರವರ ಜಮೀನು, ದಕ್ಷಿಣಕ್ಕೆ ನನಗೆ ಸೇರಿದ ಜಮೀನು ಇದೆ. ಸದರಿ 20 ಗುಂಟೆ ಜಮೀನಿನಲ್ಲೇ ನನ್ನ ವಾಸದ ಮನೆ ಇದೆ. 20 ಗುಂಟೆ ಜಮೀನನ್ನು ಹೊರತುಪಡಿಸಿ ನನ್ನ ತಂದೆಯಿಂದ ಬಂದ ಸ.ನಂ.190 ರಲ್ಲಿ 18 ಗುಂಟೆ ಜಮೀನಿನ ಪಹಣಿ ನನ್ನ ಹೆಸರಿಗೆ ಇದೆ. ಅರಣ್ಯ ಹಕ್ಕು ಸಮಿತಿಯಿಂದ ನನಗೆ 4 ಎಕರೆ ಜಮೀನು ಮಂಜೂರಾಗಿದೆ. ಸದರಿ 4 ಎಕರೆ ಜಮೀನಿನ ಪೂರ್ವಕ್ಕೆ ಭಾಸ್ಕರ್ ರವರ ಜಮೀನು, ಪಶ್ಚಿಮಕ್ಕೆ ಭೀಮೇಶ್ವರ ಜೋಶಿರವರ ಜಮೀನು, ಉತ್ತರಕ್ಕೆ ಉದಯ್ ರವರ ಜಮೀನು ಮತ್ತು ದಕ್ಷಿಣಕ್ಕೆ ಪದ್ಮನಾಭ ರವರ ಜಮೀನು ಇದೆ. ನನಗೆ ಸೇರಿದ 20 ಗುಂಟೆ ಜಮೀನು ಹಾಗೂ 4 ಎಕರೆ ಜಮೀನುಗಳ ನಡುವೆ ಅಂದಾಜು 1000 ಮೀಟರ್ ನಷ್ಟು ಅಂತರ ಇರಬಹುದು. ಒಂದು ಎಕರೆ ಕಾಫೀ ಜಮೀನಿಗೆ ರೂ.8,00,000/- ಮೌಲ್ಯ ಇದೆ ಎಂದರೆ ಸರಿ.

<u>**ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.